ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲೊಂದು ವಿಶಿಷ್ಟ ಪ್ರಸಂಗವಿದೆ. ಮಲೆನಾಡ ಜಮೀನ್ದಾರರು ಗಾಂಧೀ ಚಳವಳಿಯಿಂದ ಪ್ರೇರಿತರಾಗಿ ಕುಡಿತ ಕೈಬಿಡಲು ಸಭೆ ಸೇರುತ್ತಾರೆ. ಕಾರ್ಯಕ್ರಮವೇನೊ ಪಾನನಿಷೇಧ ಸಂಕಲ್ಪದಿಂದ ಶುರುವಾಗುತ್ತದೆ; ಮುಕ್ತಾಯವಾಗುವುದು ಮಾತ್ರ ಬಗನಿಕಳ್ಳು ಆರೋಗ್ಯಕ್ಕೆ ಎಷ್ಟು ಒಳ್ಳೆಯದು ಎಂಬ ನಿರ್ಣಯದಲ್ಲಿ. ಸಭೆ ಹೀಗೆ ಉಲ್ಟಾ ಹೊಡೆಯಲು ಕಾರಣ ಭಾಷಣಕಾರರಲ್ಲ; ಅವರ ಹೊಟ್ಟೆಯಲ್ಲಿ ತುಂಬಿ ತುಳುಕುತ್ತಿದ್ದ ತಾಜಾ ಬಗನಿಕಳ್ಳು. ಪಾನಿಗಳೇ ಹೀಗೆ. ನಿರಂಕುಶಮತಿಗಳು. ಪಾನಪೂರ್ವ ವಾಗ್ದಾನವೆಂತೇ ಇರಲಿ, ಪಾನೋತ್ತರ ಘಟ್ಟದಲ್ಲಿ ಅಂತರಾತ್ಮನ ಮಾತನ್ನಷ್ಟೆ ಆಲಿಸುವವರು. ಸಮಸ್ಯೆಯೆಂದರೆ, ಈ ಅಂತರಾತ್ಮ ಎನ್ನುವುದು ಅವರ ವಶದಲ್ಲಿರುವುದಿಲ್ಲ. ಚಿಕ್ಕಂದಿನಲ್ಲಿ ಓದಿದ 'ಚಂದಮಾಮ' ಕತೆಯಲ್ಲೂ ಇಂಥದೇ ಪ್ರಸಂಗವಿದೆ. ಕಾಡಿನಿಂದ ಸೌದೆ ತಂದು ಮಾರುವ ಒಬ್ಬನಿಗೆ, ಜೀವನದಲ್ಲೊಮ್ಮೆ ಕಂಠಮಟ್ಟ ಹೆಂಡಹೀರುವ ಬಯಕೆಯಿರುತ್ತದೆ. ಆತನೊಮ್ಮೆ ದಾರಿಯಲ್ಲಿ ಒಂದು ಕೊಳ ಕಾಣುತ್ತಾನೆ. ಮನಸ್ಸಿನಲ್ಲಿ 'ಈ ಹೊಂಡದ ನೀರೆಲ್ಲ ಹೆಂಡವಾದರೆ ಕುಡಿದು ಇಲ್ಲೇ ಜೀವ ಬಿಡುತ್ತಿದ್ದೆ' ಎಂಬ ಕಲ್ಪನೆ ಹಾದುಹೋಗುತ್ತದೆ. ಇದನ್ನರಿತ ವನದೇವತೆ ಕುತೂಹಲದಿಂದ ಅವನಿಚ್ಛೆಯಂತೆ ನೀರನ್ನೆಲ್ಲ ಹೆಂಡವಾಗಿಸುತ್ತಾಳೆ. ಸೌದೆಕಾರ ಚೆನ್ನಾಗಿ ಕುಡಿದು ಅದರಲ್ಲೇ ಈಜಾಡುತ್ತಾನೆ. ಗಡದ್ದಾದ ನಿದ್ದೆ ತೆಗೆದ ಬಳಿಕ ಕೊಡಲಿ ಹೆಗಲಿಗಿರಿಸಿ ಹೊರಡುತ್ತಾನೆ. ಆಗ ವನದೇವತೆ ಪ್ರತ್ಯಕ್ಷವಾಗಿ, 'ಏನಪ್ಪ, ಕುಡಿದು ಸಾಯ್ತೀನಿ ಅಂತಿದ್ದೆ?' ಎಂದು ಕೇಳುವಳು. 'ಕುಡುಕರ ಮಾತು ಕಟ್ಕೊಂಡು ಬಂದಿದ್ದೀಯಲ್ಲ, ಬುದ್ಧಿಗಿದ್ದಿ ಇದೆಯೆನಮ್ಮ ನಿನಗೆ?' ಎಂಬ ಜವಾಬು ಬರುತ್ತದೆ. ಪಾನನಿಷೇಧ ಸಭೆಯ ಭಾಷಣಕಾರರಿಗೆ 'ಯಾಕೆ ಹೀಗೆ ಮಾಡಿದಿರಿ?' ಎಂದು ಕೇಳಿದ್ದರೂ ಇಂಥದೇ ತಡಕಾ ಜವಾಬು ಸಿಕ್ಕಿರುತ್ತಿತ್ತು.

ಪಾನಿಗಳು ಹೀಗೇಕೆ ವಚನಭಂಗ ಮಾಡುತ್ತಾರೆ? 'ಇರುವುದನು ಬಿಟ್ಟು ಇರುದುದೆಡೆಗೆ ತುಡಿ'ಯುತ್ತಾರೆ? ಕ್ಷೀರದೊಳಗಡಗಿದ ಘೃತದಂತೆ ಮದಿರೆಯೊಳಡಗಿದ ನಶೆಯೆಂಬ ಶಕ್ತಿಯ ಆಟವದು. ಮದಿರೆಗೆ 'ಸೆರೆ' ಎಂಬ ಪರ್ಯಾಯ ಶಬ್ದವಿದೆ. ಅದಕ್ಕೆ ಬಂಧನ ಎಂಬರ್ಥವೂ ಇದೆ. ವಾಸ್ತವದಲ್ಲಿ ಮದಿರೆಗೆ ಇಹಲೋಕದ ಸಂಕಲೆಗಳಿಂದ ಬಂಧಿತವಾಗಿರುವ ಸುಪ್ತಚಿತ್ತವನ್ನು ಮುಕ್ತಗೊಳಿಸಿ ಉರಿಯುವ ನಗ್ನಸತ್ಯಗಳನ್ನು ಹೊರಹಾಕುವ ಅಗೋಚರ, ಅಗಮ್ಯ ಶಕ್ತಿಯಿದೆ.

ಅಪ್ಪನ ಗೆಣೆಕಾರನಾಗಿದ್ದ ಮೈಲಾರಣ್ಣನ ನಶೆಯಾಟ ನೆನಪಾಗುತ್ತಿದೆ. ದನಗಳ ಸಾಟಿ ವ್ಯವಹಾರ ಮಾಡುತ್ತ ಹೆಗಲು ತೊಳೆದ ಬಸವನಂತೆ ಊರೂರು ತಿರುಗುತ್ತಿದ್ದ ಈತ, ಪೇಟೆಯಿಂದ ತಿಂಡಿಪೊಟ್ಟಣ ತರುತ್ತಿದ್ದರಿಂದ ನಮಗೆಲ್ಲ ಪ್ರಿಯನಾಗಿದ್ದನು. ಇವನ ಎರಡನೇ ಹೆಂಡತಿಗೆ, ಆಗಾಗ್ಗೆ ಗಂಡನನ್ನು ಬಿಟ್ಟು ತರುಣ ಪ್ರಿಯಕರನ ಜತೆ ಕಣ್ಮರೆಯಾಗುವ ಅಭ್ಯಾಸವಿತ್ತು. ಆಗೆಲ್ಲ ಮೈಲಾರಣ್ಣ ನಮ್ಮ ಆಲೆಮನೆಯಲ್ಲಿ ವಸ್ತಿಹಾಕಿ, ಭಟ್ಟಿಶರಾಪನ್ನು ಚೆನ್ನಾಗಿ ಏರಿಸಿ, ವ್ಯಗ್ರತೆಯೂ ದೈನ್ಯವೂ ಬೆರೆತ ಸ್ವರದಲ್ಲಿ 'ನನ್ನ ಬಿಟ್ಟು ಹೋದ್ಯಲ್ಲೆ ಗೌರಾ' ಎಂದು ಪ್ರಲಾಪಿಸುತಿದ್ದನು. ಕಟಕಟ ಹಲ್ಲುಕಡಿಯುತ್ತ ರಾತ್ರಿಯಿಡೀ ಮುಲುಕುತ್ತಿದ್ದನು. ಬೆಳಕು ಹರಿಯಿತೊ, ರಾತ್ರಿ ಏನೂ ನಡೆದಿಲ್ಲವೆಂಬಂತೆ ಚಿಂತಾಮುಕ್ತನಾಗಿ ಜನರನ್ನು ಸಹಜವಾಗಿ ಮಾತಾಡಿಸುತ್ತಿದ್ದನು. ನಮಗೆ ಈ ದ್ವಿಪಾತ್ರಾಭಿನಯ ಸೋಜಿಗ ತರುತ್ತಿತ್ತು. ಪರಕಾಯ ಪ್ರವೇಶ ಮಾಡುವ ಕುಡುಕರು ನೈಸರ್ಗಿಕ ನಟರು. ಎಂತಲೇ ಇರಬೇಕು, ಮಾಟಮಂತ್ರಗಳ ಹಾಗೆ ನಾಟಕಕಲೆಯೂ ನಿಶಾಕಾಲದ ಚಟುವಟಿಕೆಯಾಗಿದೆ.